ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಡಿಸೆಂಬರ್ ೬, ೨೦೧೨ (ಮಾರ್ಗಶಿರ ೧೫, ಶಕ ವರ್ಷ ೧೯೩೪)	ಸಂಚಿಕೆ ೪೮

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

2011–12

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹರಪನಹಳ್ಳಿ ಉಪವಿಭಾಗ ಹರಪನಹಳ್ಳಿ ಕಾರ್ಯಾಲಯದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005(ಕೇಂದ್ರ ಕಾಯ್ದೆ 22/05)

ಕಲಂ 4 (1) ಬಿ ರಂತೆ ಸಾರ್ವಜನಿಕ ಮಾಹಿತಿಗಾಗಿ ಈ ಕೆಳಗಿನಂತೆ ಪ್ರಕಟಿಸಿದೆ

1. 4 (1) ಬಿ (1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹರಪನಹಳ್ಳಿ ಉಪವಿಭಾಗ ಹರಪನಹಳ್ಳಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಖೆಗಳ ವಿವರಗಳು.

ಕ್ರ.ಸಂ	ಶಾಖೆಗಳು	ವಿವರಗಳು
1	ಆಡಳಿತ ವಿಭಾಗ	ಕಛೇರಿ ಟಪಾಲು ನಿರ್ವಹಣೆ, ಸಿಬ್ಬಂದಿ ಮೇಲ್ವಿಚಾರಣೆ, ಹಾಜರಾತಿ ಪುಸ್ತಕ ಎಲ್ಲಾ ಸಭೆಗಳ ಮಾಹಿತಿಯನ್ನು ಕ್ರೋಢಿಕರಿಸುವುದು.ದೂರವಾಣಿ ನಿರ್ವಹಣೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಕೇಂದ್ರ ಸ್ಥಾನದಲ್ಲಿ ಇಲ್ಲದಿದ್ದಾಗ ಅತಿ ಜರೂರು ಹಾಗೂ ಮಹತ್ವದ ಕಡತಗಳನ್ನು ವಿಲೇವಾರಿ ಮಾಡುವುದು.ಮೇಲಾಧಿಕಾರಿಗಳಿಂದ ಬರುವ ನಿರ್ದೇಶನ ಹಾಗೂ ಆದೇಶಗಳನ್ನು ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ತಿಳಿಸುವುದು. ಮೇಲಾಧಿಕಾರಿಗಳು ವಹಿಸುವ ಇನ್ನಿತರ ಕೆಲಸಗಳು
2	ಯೋಜನೆ ಶಾಖೆ	ಎನ್.ಸಿ.ಡಿ.ಸಿ. ಮತ್ತು ಕೇಂದ್ರ ಪುರಸ್ಕೃತ ಯೋಜನೆ ಮತ್ತು ರಾಜ್ಯ, ಜಿಲ್ಲಾ ಪಂಚಾಯತ್, ಮತ್ತು ತಾಲ್ಲೂಕ ಪಂಚಾಯತ್ ಇವರುಗಳಿಂದ ವಿವಿದ ಯೋಜನೆಗಳಿಗೆ ಹಂಚಿಕೆಯಾದ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವದು.
3	ನೋಂದಣಿ ಶಾಖೆ	ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಇರುವ ಸಹಕಾರಿ ಸಂಘಗಳ ನೋಂದಣಿ ಮತ್ತು ಸೌಹಾರ್ದ ಕಾಯ್ದೆಯಡಿಯಲ್ಲಿ ಸೌಹಾರ್ದ ಸಹಕಾರಿಗಳ ನೋಂದಣಿ ಮಾಡುವದು. ಹಾಗೂ ಸಂಘದ ಬೈಲಾ ತಿದ್ದುಪಡಿ
4	ಉಪ ನಿಯಮಗಳ ತಿದ್ದುಪಡಿ ಶಾಖೆ.	ಸಹಕಾರ ಸಂಘಗಳ ಉಪ ನಿಯಮಗಳನ್ನು ತಿದ್ದುಪಡಿ ಮಾಡುವುದು ಹಾಗೂ ಸೌಹಾರ್ದ ಸಹಕಾರಿಗಳ ಉಪ ನಿಯಮಗಳನ್ನು ತಿದ್ದುಪಡಿ ಮಾಡುವುದು.

ಕ್ರ.ಸಂ	ಶಾಖೆಗಳು	ವಿವರಗಳು
5	ಸಮಾಪನೆ ಶಾಖೆ	ನಿಷ್ಕ್ರೀಯಗೊಂಡ ಸಹಕಾರ ಸಂಘಗಳನ್ನು ಸಮಾನೆಗೊಳಿಸಲು, ಸಮಾಪನಾಧಿಕಾರಿಗಳನ್ನು ನೇಮಿಸುವ ಕುರಿತಂತೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು. ಸಮಾನೆಗೊಂಡ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಪುನಶ್ಚೇತನಗೊಳಿಸಲು / ರದ್ದುಗೊಳಿಸಲು ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವ ಕ್ರಮವಿಡುವುದು.
6	ಪತ್ತು ಮಾರಾಟ ಮತ್ತು ಬಳಕೆ ಶಾಖೆ	ಸಹಕಾರ ಸಂಘಗಳ ರೈತ ಸದಸ್ಯರಿಗೆ ಸಾಲ ಹಂಚಿಕೆ ಹಾಗೂ ಸಾಲ ವಸೂಲಾತಿಗೆ ಕ್ರಮವಿಡುವುದು. ಮಾರಾಟ ಮತ್ತು ಬಳಕೆ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸುವುದು.
7	ದಾವಾ ಶಾಖೆ	ಕಲಂ 70 ರ ವಿವಾದಗಳನ್ನು ಇತ್ಯರ್ಥ ಪಡಿಸುವುದು.
8	ಅಧಿಭಾರ ಶಾಖೆ	ಕಲಂ 69 ರ ಅಧಿಭಾರ ಪ್ರಕರಣಗಳನ್ನು ಮತ್ತು ಕಲಂ 29(ಸಿ) ರ ಪ್ರಕರಣವನ್ನು ಇತ್ಯರ್ಥಪಡಿಸುವುದು.
9	ಅಮಲ್ ಬಜಾವಣೆ ಶಾಖೆ	ಅಮಲ್ ಬಜಾವಣೆ ಜಾರಿಗೊಳಿಸಿ ಹಣ ವಸೂಲಾತಿ ಮಾಡಿ ವಿಲೇವಾರಿ ಮಾಡುವುದು.
10	ಸಿಬ್ಬಂದಿ ಶಾಖೆ	ಕಛೇರಿ ಸಿಬ್ಬಂದಿ ವರ್ಗದವರ ಸೇವಾ ವಿವರಗಳಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸುವುದು.
11	ಲೆಕ್ಕ ಶಾಖೆ	ಕಛೇರಿ ಆಡಳಿತಕ್ಕೆ ಸಂಬಂಧಪಟ್ಟಂತ ಕಛೇರಿ ವೆಚ್ಚ, ದೂರವಾಣಿ ವೆಚ್ಚ, ಮತ್ತು ಪ್ರವಾಸದ ಬಿಲ್ಲುಗಳನ್ನು ತಯಾರಿಸುವುದು, ಮತ್ತು ಸಿಬ್ಬಂದಿ ವರ್ಗದವರ ವೇತನ ಬಿಲ್ಲುಗಳನ್ನು ತಯಾರಿಸುವುದು, ಪೀಠೋಪಕರಣಗಳ ನಿರ್ವಹಣೆ, ಲೈಬರ್ರಿ ನಿರ್ವಹಣೆ,
12	ಲೆಕ್ಕ ಪರಿಶೋಧನೆ ಶಾಖೆ	ಲೆಕ್ಕ ಪರಿಶೋಧನಾ ವರದಿಗಳಲ್ಲಿರುವ ನ್ಯೂನ್ಯತೆಗೆ ಸಂಬಂಧಪಟ್ಟಂತೆ ಕಲಂ 68ರಡಿ ಆದೇಶ ಹೊರಡಿಸುವದು ಹಾಗೂ ಅನುಪಾಲನ ವರದಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವದು.
13	ಹಣ ದುರುಪಯೋಗ ಶಾಖೆ	ಕಲಂ 63,64,65. ವರದಿಗಳಲ್ಲಿ ಪತ್ತೆಯಾದ ಹಣ ದುರುಪಯೋಗ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸಿವಿಲ್ ಹಾಗೂ ಕ್ರಿಮಿನಲ್ ಕ್ರಮ ಜರುಗಿಸುವದು.
14	ಕೆ.ಪಿ.ಎಂ.ಆರ್.ಕ.ಕಂಪ್ಯಾಕ್ಟ್ ಶಾಖೆ	ಕೆ.ಪಿ.ಎಂ.ಆರ್. ಮತ್ತು ಕ.ಕಂಪ್ಯಾಕ್ಟ್ ಕಾಯ್ದೆಗಳಡಿ ದಾಖಲಿಸಿದ ಪ್ರಕರಣಗಳನ್ನು ಇತ್ಯರ್ಥಪಡಿಸುವದು.
15	ಲೇವಾದೇವಿ ಶಾಖೆ	ಲೇವಾದೇವಿ, ಗಿರಿವಿ ಮತ್ತು ಹಣಕಾಸು ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಪರವಾನಿಗೆ ನೀಡುವ ಪೂರ್ವದಲ್ಲಿ ಪರಿಶೀಲನೆ ಮಾಡಿ ಪ್ರಸ್ತಾವನೆಯನ್ನು ಮೇಲಾಧಿಕಾರಿಗೆ ಸಲ್ಲಿಸುವುದು.
16	ಚಿಟ್ಸ್ ಶಾಖೆ	ಚಿಟ್ಸ್ ಪ್ರಾರಂಭಿಸುವ ಮುನ್ನ ಪೂರ್ವಾನುಮತಿ ನೀಡುವದು ನಂತರ ಚಿಟ್ಸ್ ಪ್ರಾರಂಭಿಸಲು ಪ್ರಮಾಣ ಪತ್ರ ನೀಡುವದು ಹಾಗೂ ಚೀಟಿ ಮುಕ್ತಾಯವಾದ ನಂತರ ಭದ್ರತಾ ಠೇವಣಿ ಪತ್ರವನ್ನು ಬಿಡುಗಡೆಗೊಳಿಸಲಾಗುವುದು ಮತ್ತು ಚಿಟ್ಸ ವ್ಯಾಜ್ಯಗಳನ್ನು ಇತ್ಯರ್ಥ ಪಡಿಸುವದು. ಮತ್ತು ಮೇಲ್ವಿಚಾರಣೆ.
17	ದೂರು ಶಾಖೆ	ಸಾರ್ವಜನಿಕ ದೂರುಗಳನ್ನು ವಿಚಾರಣೆ ಮಾಡಿ ಇತ್ಯರ್ಥಪಡಿಸುವದು.
18	ಆವಕ ಜಾವಕ ಶಾಖೆಗಳು	ಕಛೇರಿಗೆ ಬಂದಂತಹ ಪತ್ರಗಳನ್ನು ಸ್ವೀಕರಿಸುವದು ಮತ್ತು ರವಾನಿಸುವುದು.
19	ಅಭಿಲೇಖಾಲಯ ಶಾಖೆ	ಕಛೇರಿ ಕೈಪಿಡಿ ಅನುಸಾರವಾಗಿ ಮುಕ್ತಾಯಗೊಂಡ ಕಡತಗಳನ್ನು ರಿಕಾರ್ಡ ರೂಮಿನಲ್ಲಿ ಕಾಯ್ದಿರಿಸಿಡುವದು.
20	ಯಶಸ್ವಿನಿ ಶಾಖೆ	ದಾವಣಗೆರೆ ಉಪ ವಿಭಾಗದ ಸಹಕಾರ ಸಂಘಗಳ ಸದಸ್ಯರ ಮತ್ತು ಅವರ ಕುಟುಂಬ ಹಾಗೂ ಅವಲಂಭಿತರು ಯಶಸ್ವಿನಿ ರೈತ ಸಹಕಾರ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ಸದಸ್ಯರನ್ನಾಗಿ ಮಾಡುವದು. ಮತ್ತು ಯೋಜನೆಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುವದು.
21	ಚುನಾವಣೆ ಶಾಖೆ ಮತ್ತು ವಾರ್ಷಿಕ ಮಹಾಸಭೆ	ಪ್ರತಿ 5 ವರ್ಷಗಳಿಗೊಮ್ಮೆ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ಜರುಗಿಸುವದು. ಮತ್ತು ಪ್ರತಿ ವರ್ಷ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಜರುಗಿಸುವ ಬಗ್ಗೆ ಕ್ರಮವಿಡುವುದು. ಸಹಕಾರ ಸಂಘಗಳ ಕಾಯ್ದೆ ಕಲಂ 28ಎ (5), 30 ಮತ್ತು 31 ರಡಯಲ್ಲಿ ಸಹಕಾರ ಸಂಘಗಳ ಆಡಳಿತ ಮಂಡಳಿ ರದ್ದುಪಡಿಸಿ ಆಡಳಿತಾಧಿಕಾರಿ/ವಿಶೇಷಾಧಿಕಾರಿ ನೇಮಿಸಲು ಕ್ರಮಕೈಗೊಳ್ಳುವದು.

ಕ್ರ.ಸಂ	ಶಾಖೆಗಳು	ವಿವರಗಳು
22	ಕಲಂ.64.65.	ಕ.ಸ.ಸಂ.ಗಳ ಕಾಯ್ದೆ 1959 ರ ಕಲಂ.64,65 ರ ಅಡಿ ವಿಚಾರಣೆಗೆ ಮತ್ತು ಪರಿವೀಕ್ಷಣೆಗೆ ಆದೇಶ ನೀಡುವುದು ಮತ್ತು ಇವುಗಳಲ್ಲಿ ಬಂದ ವರದಿಗಳ ಮೇಲೆ ಕಲಂ.68 ಆದೇಶ ಹೊರಡಿಸಲಾಗುವುದು.
23	ಮಾಹಿತಿ ಹಕ್ಕು ಅಧಿನಿಯಮ 2005	ಸಾರ್ವಜನಿಕರಿಂದ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ, ಕೇಳಿರುವ ಮಾಹಿತಿಯನ್ನು ಪೂರೈಸಲಾಗುವುದು.

2011–12

4(1) ಬಿ (II) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪ ವಿಭಾಗದ ಕಛೇರಿಯ ಅಧಿಕಾರಿ ಮತ್ತು ನೌಕರರ ಅಧಿಕಾರಿಗಳು ಮತ್ತು ಕರ್ತವ್ಯಗಳು:–

ಕ್ರ.ಸಂ	ಶಾಖೆಗಳು	ವಿವರಗಳು
1	ಶ್ರೀ ಜಿ ಮಲ್ಲಪ್ಪ , ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪ ವಿಭಾಗ ಹರಪನಹಳ್ಳಿ	ಹರಪನಹಳ್ಳಿ ಉಪ ವಿಭಾಗದ ಸಹಕಾರ ಸಂಘಗಳ ಹಾಗೂ ಇಲಾಖೆ ಕಛೇರಿಯ ಆಡಳಿತ ನಿರ್ವಹಣೆ
2	ಶ್ರೀ ಗೋವಿಂದರಾವ ಸಹಕಾರ ಅಭಿವೃದ್ಧಿ ಅಧಿಕಾರಿಗಳು	ಯೋಜನೆ ಶಾಖೆ ಉಪ ವಿಭಾಗದಲ್ಲಿ ಬರುವ ಗೋದಾಮುಗಳಿಗೆ ಸಂಬಂಧಿಸಿದಂತೆ ಸಮಗ್ರ ಮಾಹಿತಿ, ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್, ಎನ್.ಸಿ.ಡಿ.ಸಿ ಇವುಗಳಿಗೆ ಸಂಬಂಧಿಸಿದ ಅರ್ಥಿಕ ಪ್ರಸ್ತಾವನೆ ತಯಾರಿಸುವುದು, ಸಲ್ಲಿಸುವುದು ಹಾಗೂ ಪತ್ರ ವ್ಯವಹಾರ, ಸಹಕಾರ ಸಂಘಗಳಿಂದ ಸರ್ಕಾರಿ ಸಾಲ ವಸೂಲಾತಿ, ವಾರ್ಷಿಕ ಅಂಕಿ–ಅಂಶಗಳ ತ:ಖ್ತೆ ತಯಾರಿಸುವುದು, ಸಲ್ಲಿಸುವುದು. ವ್ಯಾಪಾರಾಭಿವೃದ್ಧಿ ಯೋಜನೆ, ಅಮಲ್ಜಾರಿ ಪ್ರಕರಣಗಳಲ್ಲಿ ವಸೂಲಾತಿ, ಉಚ್ಚನ್ಯಾಯಾಲಯ/ ಅಧೀನ ನ್ಯಾಯಾಲಯಗಳ ದಾವೆಗಳಿಗೆ ಸಂಬಂಧಿಸಿದಂತೆ ಕಂಡಿಕೆವಾರು ಉತ್ತರ ತಯಾರಿಸುವುದು. ಕಛೇರಿ ಪರಿವೀಕ್ಷಣೆಗೆ ಅನುಪಾಲನಾ ವರದಿ ತಯಾರಿಸಿ ಸಲ್ಲಿಸುವುದು. ಕಛೇರಿಗೆ ಸ್ವೀಕೃತವಾದ ಪತ್ರಗಳನ್ನು ತೆರೆಯುವುದು. ಕಛೇರಿ ಸಿಬ್ಬಂದಿ ವರ್ಗದವರಿಗೆ ಕಾಲ ಕಾಲಕ್ಕೆ ಮಾರ್ಗದರ್ಶನ ನೀಡುವುದು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಹಿಸಿಕೊಡುವ ಇತರೆ ಯಾವುದೇ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವುದು.
3	ಶ್ರೀ ಗಿರಿರಾಜ್, ಅಧೀಕ್ಷಕರು	ಕಛೇರಿಯ ಸಮಗ್ರ ಮೇಲ್ವಿಚಾರಣೆ
4	ಶ್ರೀ.ಟಿ ಚನ್ನಬಸಪ್ಪ, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಅಧೀನ ಸಿಬ್ಬಂದಿಗಳ ಸಮಗ್ರ ಮೇಲ್ವಿಚಾರಣೆ, ಕಲಂ28ಎ(5), ಕಲಂ29ಸಿ , ಕಲಂ 30, 31, 69, 70, 103, ಅಮಲ್ಜಾರಿ ಪ್ರಕರಣಗಳ ದಾಖಲಾತಿ ವಿಲೇವಾರಿ, ಲೇವಾದೇವಿ, ಗಿರವಿ, ಹಣಕಾಸು ಸಂಸ್ಥೆಗಳು, ಚಿಟ್ಸ್ ಶಾಖೆ, ಕೆ.ಪಿ.ಎಂ.ಆರ್., ಕ್ಯಾಕಂಪಾಕ್ಟ್ ಮಾಹಿತಿ ಹಕ್ಕು ಅಧಿ ನಿಯಮ ಕಾಯ್ದೆಯೆಡಿ ಬರುವ ಅರ್ಜಿಗಳ ನಿರ್ವಹಣೆ, ಸಿಬ್ಬಂದಿ ಶಾಖೆ, ಸೇವಾ ಪುಸ್ತಕಗಳ ನಿರ್ವಹಣೆ, ಲೆಕ್ಕ ಶಾಖೆ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ವಾರ್ಷಿಕ, ಮಾಸಿಕ ಪರಿವೀಕ್ಷಣೆ, ತಾತ್ಕಾಲಿಕ ಪ್ರವಾಸ ಪಟ್ಟಿ, ದಿನಚರಿ, ಪ್ರವಾಸ ಭತ್ಯೆ ಬಿಲ್ಲುಗಳನ್ನು ತಯಾರಿಸುವುದು ಮತ್ತು ಸಹಕಾರ ಅಭಿವೃದ್ಧಿ ಅಧಿಕಾರಿ ಜಗಳೂರು, ನಿರೀಕ್ಷಕರು, ಜಗಳೂರು, ಸಹಕಾರ ಅಭಿವೃದ್ಧಿ ಅಧಿಕಾರಿ ಹರಪನಹಳ್ಳಿ, ಇವರ ಪ್ರವಾಸ ಪಟ್ಟಿ ಅನುಮೋದನೆ, ದಿನಚರಿ ವಿಮರ್ಶೆ ಹಾಗೂ ಹರಪನಹಳ್ಳಿ ಉಪ ವಿಭಾಗದ ಎಲ್ಲಾ ವಿಧಧ ಸಹಕಾರ ಸಂಘಗಳ ನೌಕರರ ನೇಮಕಾತಿ/ಸೇವಾ ನಿಯಮಗಳು/ಗ್ರಾಚ್ಯುಟಿ ಬಗ್ಗೆ ಅನುಮೋದನೆಗಾಗಿ ಶಿಫಾರಸ್ಸು ಮಾಡುವ ಕೆಲಸ. ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಹಿಸಿಕೊಡುವ ಇತರೆ ಯಾವುದೇ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವುದು.
5	ಶ್ರೀ ಸೇವ್ಯಾನಾಯ್ಕ, ಸಹಕಾರ ಸಂಘಗಳ ನಿರೀಕ್ಷಕರು	ಕಲಂ 64, 65 ರ ಮೇಲೆ 68 ರ ಆದೇಶ ಹೊರಡಿಸುವುದು, ಹಣದುರುಪಯೋಗ, ವಾರ್ಷಿಕ ಮಹಾ ಸಭೆ, ಚುನಾವಣೆ, ದೂರು ಅರ್ಜಿ, ವಿಧಾನ ಸಭಾ ಮತ್ತು ವಿಧಾನ ಪರಿಷತ್ ಪ್ರಶ್ನೆಗಳಿಗೆ ಉತ್ತರ ತಯಾರಿಸುವುದು ಮತ್ತು ಈ ಬಗ್ಗೆ ವಹಿ ನಿರ್ವಹಿಸುವುದು, ಮಾಸಿಕ, ತ್ರೈಮಾಸಿಕ, ವಾರ್ಷಿಕ ಪ್ರಗತಿ ತ:ಖ್ತೆಗಳನ್ನು ತಯಾರಿಸಿ ಕ್ರೋಢೀಕರಿಸಿ ಬುಕ್‌ಲೆಟ್ ಮಾಡುವುದು, ಕಛೇರಿ ಗ್ರಂಥಾಲಯ,

ಕ್ರ.ಸಂ	ಶಾಖೆಗಳು	ವಿವರಗಳು
		ಪೀಠೋಪಕರಣ ಉಸ್ತುವಾರಿ ನಿರ್ವಹಿಸುವುದು , ಮಾರುಕಟ್ಟೆ ಶಾಖೆ, ಗೃಹ ನಿರ್ಮಾಣ, ಮೀನುಗಾರಿಕೆ, ನೀರಾವರಿ, ವಿವಿದೋದ್ದೇಶ, ಕೈಗಾರಿಕಾ ಸಹಕಾರ ಸಂಘಗಳಿಗೆ ಸಂಬಂಧಿಸಿದ ಮಾಹಿತಿಯನ್ನು ತಯಾರಿಸುವುದು, ಸಹಕಾರ ಸಂಘಗಳ ನೋಂದಣಿ, ಉಪ ನಿಯಮ ತಿದ್ದುಪಡಿ , ಕಛೇರಿಯ ಉಪಯೋಗಕ್ಕೆ ಲೇಖನ ಸಾಮಾಗ್ರಿ ನಿರ್ವಹಣೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಹಿಸಿಕೊಡುವ ಇತರೆ ಯಾವುದೇ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವುದು.
6	ಶ್ರೀ.ಎನ್ ಜಿ ಪತ್ರೇಗೌಡ, ದ್ವಿ.ದ.ಸ.	ಕಛೇರಿಗೆ ಬರುವ ಪತ್ರಗಳನ್ನು ಸಾಮಾನ್ಯ ಸ್ವೀಕೃತಿಯಲ್ಲಿ ನಮೂದು ಮಾಡಿ ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ವಿತರಿಸುವುದು, ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳು, ಪತ್ತಿನ ಸಹಕಾರ ಸಂಘಗಳು ಹಾಗೂ ಇತರೆ ಸಹಕಾರ ಸಂಘಗಳ ಸಮಗ್ರ ಮಾಹಿತಿ ತಯಾರಿಸುವುದು ಹಾಗೂ ರವಾನೆ ಮತ್ತು ಆಮದು ಶಾಖೆ ನಿರ್ವಹಿಸುವುದು, ವಾರ್ಷಿಕ ಮಹಾ ಸಭೆ, ಚುನಾವಣೆ, 29(ಜಿ)6 ನಿರ್ವಹಣೆ, ಖಜಾನೆ ಕೆಲಸ ನಿರ್ವಹಿಸುವುದು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಹಿಸಿಕೊಡುವ ಇತರೆ ಯಾವುದೇ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವುದು.
7	ಶ್ರೀ ಎಂ ಜಿ ಬಸವರಾಜು ದ್ವಿ.ದ.ಸ.	ಸಮಾಪನೆ, ಸ್ಥಗಿತಗೊಂಡ ಸಹಕಾರ ಸಂಘಗಳ ಮಾಹಿತಿ, ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ, ಕಲಂ 63 ರ ಲೆಕ್ಕ ಪರಿಶೋಧನಾ ವರದಿಗಳಿಗೆ ಪುನರ್ ವಿಲೋಕನಾ ಕೆಲಸ ಹಾಗೂ ಕಲಂ 68ರ ಆದೇಶ ಹೊರಡಿಸುವುದು, ಗ್ರಾಹಕರ, ಹಾಲು ಉತ್ಪಾದಕರ, ನೇಕಾರರ ಸಹಕಾರ ಸಂಘಗಳಿಗೆ ಸಂಬಂಧಿಸಿದ ಮಾಹಿತಿ ತಯಾರಿಸುವುದು, ದೂರು ಅರ್ಜಿಗಳ ವಿಲೇವಾರಿ, ಡಿ.ಸಿ.ಸಿ ಬ್ಯಾಂಕ್ ಮತ್ತು ಪಿಕಾರ್ಡ್ ಬ್ಯಾಂಕ್‌ಗಳ ಡಿ.ಸಿ.ಬಿ ತಯಾರಿಸುವುದು ಮತ್ತು ಹಾಗೂ ಬೆರಳಚ್ಚುಗಾರರ ಹುದ್ದೆ ಭರ್ತಿಯಾಗುವವರೆಗೆ ಕಛೇರಿಯ ಗಣಕ ಯಂತ್ರಗಳು, ಜೆರಾಕ್ಸ್ ಯಂತ್ರ, ಫಾಕ್ಸ್ ಯಂತ್ರ ಮತ್ತು ಇಂಟರ್‌ನೆಟ್ ಇವುಗಳ, ಕಛೇರಿಯ ಎಲ್ಲಾ ವಿದ್ಯುನ್ಮಾನ ಯಂತ್ರಗಳನ್ನು ಕಾರ್ಯ ನಿರತವಾಗಿರುವಂತೆ ನೋಡಿಕೊಳ್ಳುವುದು ಮತ್ತು ಅವುಗಳ ಪ್ರಾಥಮಿಕ ಜ್ಞಾನ ಹೊಂದಿಲ್ಲದವರು ಉಪಯೋಗಿಸದಂತೆ ನೋಡಿಕೊಳ್ಳುವುದು ಮತ್ತು ಅವುಗಳ ಕಾರ್ಯ ನಿರ್ವಹಣೆಯಲ್ಲಿ ತೊಡಕುಂಟಾದಲ್ಲಿ ವಿಷಯ ನಿರ್ವಾಹಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ವಹಿಸಿಕೊಡುವ ಇತರೆ ಯಾವುದೇ ಕರ್ತವ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವುದು.
8	ಬೆರಳಚ್ಚುಗಾರ	ಹುದ್ದೆ ಖಾಲಿ ಇರುತ್ತದೆ.
9	ವಾಹನ ಚಾಲಕ	ಹುದ್ದೆ ಖಾಲಿ ಇರುತ್ತದೆ.
10	ಜಾರಿಗಾರ	ಹುದ್ದೆ ಖಾಲಿ ಇರುತ್ತದೆ.
11	ಡಿ.ದರ್ಜೆ ನೌಕರ	ಹುದ್ದೆ ಖಾಲಿ ಇರುತ್ತದೆ.

4 (1) ಬಿ (III): ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗ ಸೂಚಿಗಳನ್ನೊಳಗೊಂಡ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯವಿಧಾನ:

1. ಹರಪನಹಳ್ಳಿ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ, ಮಾರ್ಗದರ್ಶನ. ಮತ್ತು ನಿರ್ಣಯ ತೆಗೆದುಕೊಳ್ಳುವದು.

2. ಅಧೀಕ್ಷಕರು : ವಿಷಯ ನಿರ್ವಾಹಕರು ಮಂಡಿಸಿದ ಪ್ರಸ್ತಾವನೆಯನ್ನು ಪರಿಸೀಲಿಸಿ ತೆಗೆದು ಕೊಳ್ಳಬಹುದಾದ ಕ್ರಮಗಳ ಬಗ್ಗೆ ಸಹಾಯಕ ನಿಬಂಧಕರವರಿಗೆ ಕಡತ ಮಂಡಿಸುವದು.

3. ವಿಷಯ ನಿರ್ವಾಹಕರು : ಕಛೇರಿ ಕಾರ್ಯವಿಧಾನ ಕೈಪಿಡಿಯಂತೆ ಅವರಿಗೆ ವಹಿಸಿದ ಶಾಖೆಗಳಿಗೆ ಸಂಬಂಧಪಟ್ಟಂತೆ ಕಾನೂನು ಮತ್ತು ನಿಯಮಗಳನ್ನು ಪರಿಶೀಲಿಸಿ ಟಿಪ್ಪಣಿಯನ್ನು ಅಧೀಕ್ಷಕರಿಗೆ ಮಂಡಿಸುವದು.

4(1) ಬಿ (IV) ಪ್ರಕಾರ್ಯಗಳ ನಿರ್ವಹಣೆ ಅಳಪಡಿಸಿಕೊಂಡಿರುವ ಸೂತ್ರಗಳು:

1. ಸಹಕಾರ ಸಂಘಗಳ ಸಹಾಯಕ ನಿಬಂಧಕರು: ಆದ್ಯತೆಯ ಮೇರೆಗೆ ಕಾರ್ಯಗಳನ್ನು ನಿರ್ವಹಿಸುವದು.

2. ಸಹಕಾರ ಅಭಿವೃದ್ಧಿ ಅಧಿಕಾರಿ ಒಂದು ಹುದ್ದೆ ಇದ್ದು, ಹರಪನಹಳ್ಳಿ ತಾಲೂಕಿನ ಸಹಕಾರ ಅಭಿವೃದ್ಧಿ ಕೆಲಸ ನಿರ್ವಹಣೆ ಹಾಗೂ ಮೇಲಿನಂತೆ ಕಚೇರಿಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ

3. ಕಛೇರಿ ಅಧೀಕ್ಷಕರು: ವಿಷಯ ನಿರ್ವಹಕರು ಮಂಡಿಸಿದ ಕಡತಗಳನ್ನು ಪರಿಶೀಲಿಸಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ತಿಳಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರವರಿಗೆ ಕಡತ ಮಂಡಿಸುವುದು.

4.ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು ಒಂದು ಹುದ್ದೆ ಇದ್ದು, ಮೇಲಿನಂತೆ ಕಚೇರಿಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ

5. ಸಹಕಾರ ಸಂಘಗಳ ನಿರೀಕ್ಷಕರು:ಈ ಕಚೇರಿಗೆ 01 ಹುದ್ದೆಗಳು ಮಂಜೂರಿಯಾಗಿದ್ದು ,ಮೇಲಿನಂತೆ ಕಚೇರಿಯ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ

6. ದ್ವಿತೀಯ ದರ್ಜೆ ಸಹಾಯಕರು : ಈ ಕಛೇರಿಗೆ 02 ಹುದ್ದೆಗಳು ಮಂಜೂರಿಯಾಗಿದ್ದು, ಮೇಲಿನಂತೆ, ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ..

7. ಬೆರಳಚ್ಚುಗಾರ : 01 ಹುದ್ದೆ ಇದ್ದು, ಹುದ್ದೆ ಖಾಲಿ ಇರುತ್ತದೆ.

8. ವಾಹನ ಚಾಲಕ:– 01 ಹುದ್ದೆ ಇದ್ದು, ಹುದ್ದೆ ಖಾಲಿ ಇರುತ್ತದೆ.

9. ಜಾರಿಗಾರರು:– 01 ಹುದ್ದೆ ಇದ್ದು, ಹುದ್ದೆ ಖಾಲಿ ಇರುತ್ತದೆ

10. ಗ್ರೂಪ್ ಡಿ ನೌಕರರು : 01 ಹುದ್ದೆ ಇದ್ದು, ಹುದ್ದೆ ಖಾಲಿ ಇರುತ್ತದೆ

4(1) ಬಿ (V): ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಕಾರ್ಯಾಲಯದ ಅಧಿಕಾರಿಗಳು ಮತ್ತು ನೌಕರರು ಪ್ರಕಾರ್ಯಗಳಿಗೆ ಬಳಸುತ್ತಿರುವ ಇಲಾಖೆಯ ಅಧೀನದಲ್ಲಿರುವ ಕಾಯ್ದೆಗಳು, ನಿಯಮಗಳು, ನಿಬಂಧನೆಗಳು, ಕೈಪಿಡಿಗಳು ಮತ್ತು ದಾಖಲೆಗಳು:–

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004.
3. ಚಿಟ್ ಫಂಡ್ ಕಾಯ್ದೆ 1982 ಮತ್ತು ಕರ್ನಾಟಕ ಚಿಟ್ ಫಂಡ್ ನಿಯಮಗಳು 1983.
4. ಕರ್ನಾಟಕ ಗಿರಿವಿ ಕಾಯ್ದೆ 1961 ಮತ್ತು ಕರ್ನಾಟಕ ಗಿರಿವಿ ನಿಯಮಗಳು 1966.
5. ಕರ್ನಾಟಕ ಲೇವಾದೇವಿ ಕಾಯ್ದೆ 1961 ಮತ್ತು ಕರ್ನಾಟಕ ಲೇವಾದೇವಿ ನಿಯಮಗಳು 1965.
6. ಕರ್ನಾಟಕ ಮಿತಿಮೀರಿ ಬಡ್ಡಿ ವಿಧಿಸುವಿಕೆಯ ನಿಷೇದ ಆಧ್ಯಾದೇಶ 2004.
7. ಕರ್ನಾಟಕ ಸಹಕಾರ ಸಂಘಗಳ (ವೃಂದಬಲ ನೇಮಕಾತಿ) ನಿಯಮಗಳು 1989.
8. ಮಾಹಿತಿ ಹಕ್ಕು ಕಾಯ್ದೆ 2005.
9. ಕರ್ನಾಟಕ ಸಾರ್ವಜನಿಕ ಹಣದ (ಹಣ ವಸೂಲಿ) ಕಾಯ್ದೆ 1979 ಮತ್ತು ಕರ್ನಾಟಕ ಅಗ್ರಿಕಲ್ಚರಲ್ ಕ್ರೆಡಿಟ್ ಅಪರೇಷನ್ಸ ಮತ್ತು ಮಿಸಿಲೇನಿಯಸ್ ಪ್ರೋವಿಜನ್ಸ ಆಕ್ಟ 1974.

4(1) ಬಿ (VI) : ಇಲಾಖೆ ಹೊಂದಿರುವ ಅಥವಾ ಇಲಾಖೆ ಸ್ವಾಧೀನದಲ್ಲಿರುವ ದಸ್ತಾವೇಜ್ ಪ್ರವರ್ಗಗಳ ಪಟ್ಟಿ

ಉಪ ವಿಭಾಗದ ಡಿ.ಸಿ.ಬಿ. ಹಾಜರಾತಿ ವಹಿ, ಸಾಂದರ್ಭಿಕ ರಜೆ ವಹಿ, ವೇತನ ಬಟವಡೆ ವಹಿ, ನಗದು ಪುಸ್ತಕ, ಪೀಠೋಪಕರಣಗಳ ವಹಿ, ಸಾದಿಲ್ವಾರು ವೆಚ್ಚದ ವಹಿ, ಅಮಲ್ ಬಜಾವಣೆ ವಹಿ, ವ್ಯಾಜ್ಯಗಳ ವಹಿ, ವಾರ್ಷಿಕ ಮಹಾಸಭೆಯ ವಹಿ, ಉಪನಿಯಮಗಳ ತಿದ್ದುಪಡಿ ವಹಿ, ಸಹಕಾರಿ ಸಂಘಗಳ ನೋಂದಣಿ ವಹಿ, ಸಮಾಪನೆ ವಹಿ, ಚಿಟ್ಸ್ ವ್ಯಾಜ್ಯಗಳ ವಹಿ, ಚಿಟ್ಸ್ ನಗದು ಪುಸ್ತಕ ವಹಿ, ಮಾಹಿತಿ ಹಕ್ಕು ವಹಿ, ಮಾಹಿತಿ ಹಕ್ಕು ನಗದು ಪುಸ್ತಕ, ಕಾರ್ಯನಿರ್ವಾಹಣಾ ವರದಿಗಳ ವಹಿ, ಲೇವಾದೇವಿ ವಹಿ, ಕೆ.ಪಿ.ಎಂ.ಆರ್. & ಕ.ಕಂಪ್ಯಾಕ್ಟ್ ವಹಿ, ಆವಕ ವಹಿ ಜಾವಕ ವಹಿ, ಸ್ಟ್ಯಾಂಪ್ ವಹಿ, ನಿಯತಕಾಲಿಕ ವಹಿ, ಹಳೆಯ ಸಾಲ ವಹಿ 1 ಮತ್ತು 2, ಸರ್ಕಾರದ ಗೋದಾಮ ಸಾಲ (ಹಳೆದು) ಮತ್ತು ಅನುದಾನ ಸಹಾಯ ಧನ ಸರ್ಕಾರದ ಷೇರು ಬಂಡವಾಳ ವಹಿ 1,2 ಮತ್ತು 3 ವಿವಿಧ ಯೋಜನೆಯಡಿಯಲ್ಲಿ ಮಂಜೂರಾದ ಆರ್ಥಿಕ ನೆರವಿನ ಮತ್ತು ವಿನಿಯೋಗ ಪ್ರಮಾಣ ಪತ್ರ ಸಲ್ಲಿಸಿದ ವಹಿ, (ಹೊಸದು ಮತ್ತು ಹಳೆದು) ಸರ್ಕಾರದ ಆರ್ಥಿಕ ನೆರವು ಮರಳಿ ಪಾವತಿಸಿದ ವಹಿ, ಸರ್ಕಾರದ ವಸೂಲಾತಿ ವಹಿ, ಖಜಾನೆಯಿಂದ ನಗಧೀಕರಣಗೊಳಿಸಲಾದ ಆರ್ಥಿಕ ನೆರವಿನ ವಹಿ, ನಗದಿಕರಣಗೊಳಿಸಿದ ಚೆಕ್‌ಗಳನ್ನು .ಡಿ.ಸಿ.ಸಿ ಬ್ಯಾಂಕಿಗೆ ಕಳುಹಿಸಿದ ವಹಿ, ನಿಯತಕಾಲಿಕ ವಹಿ, ತಾಲ್ಲೂಕ ಪಂಚಾಯತಿಯಿಂದ ಬಿಡುಗಡೆಯಾದ ಆರ್ಥಿಕ ನೆರವಿನ ವಹಿ, ಪಿಕಾರ್ಡ ಬ್ಯಾಂಕನಿಂದ ಫಲಾನುಭವಿಗಳಿಗೆ ವಿಶೇಷ ಘಟಕ ಯೋಜನೆಯಡಿಯಲ್ಲಿ ಮಂಜೂರಾದ ಶೇ.60 ರ ಸಹಾಯ ಧನದ ವಹಿ, ಸರ್ಕಾರದ ಶೇರು ಹಣದ ಮೇಲೆ ಲಾಭಾಂಶ ಪಾವತಿ ವಹಿ 1 ಮತ್ತು 2,

ಉಗ್ರಾಣಗಳ ಮಾಹಿತಿ ವಹಿ, ಸರ್ಕಾರದ ಗೋದಾಮ ಸಾಲದ ವಹಿ 1,2 ಮತ್ತು 3, ಸಂಘಗಳಿಗೆ ಮಂಜೂರಾದ ಸರ್ಕಾದ ಸಾಲ ಸಹಾಯ ಧನ ಶೇರು ಹಣ ಬಿಡುಗಡೆ ವಹಿ.ನಿಯತಕಾಲಿಕ ವಹಿ, ಕಲಂ.64,65 ರ ವಹಿ, ದೂರು ಅರ್ಜಿಗಳ ವಹಿ, ಅನುದಾನದ ವಹಿ, ಕಾರ್ಯನಿರ್ವಹಣಾ ವರದಿಗಳ ಚಲನ ವಲನ ವಹಿ, ಚುಕ್ಕೆ ಗುರುತಿನ ಪ್ರಶ್ನೆ ವಹಿ,

4(1) ಬಿ (VII): ಕಾರ್ಯನೀತಿಯನ್ನು ರೂಪಿಸಲು ಅಥವಾ ಅನುಷ್ಠಾನಗೊಳಿಸಲು ಬಗ್ಗೆ ಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯಕ್ಕೆ ಇರುವ ವ್ಯವಸ್ಥೆಗಳ ವಿವರಗಳು – ಇಲ್ಲ.

4(1) ಬಿ (VIII): ಸಲಹೆಯನ್ನು ಪಡೆಯುವ ಸಂಧರ್ಭದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಇರುವಂತೆ ರಚಿಸಿರುವ ಮಂಡಳಿಗಳು, ಪರಿಷತ್‌ಗಳು, ಸಮಿತಿಗಳು, ಮತ್ತು ಇತರೆ ಸಂಸ್ಥೆಗಳು ಹಾಗೂ ಇವುಗಳು ನಡೆಸುವ ಸಭೆಗಳು ಸಾರ್ವಜನಿಕರಿಗೆ ಮುಕ್ತವೇ? ಅಥವಾ ಅಂತಹ ಸಭೆಗಳ ನಡುವಳಿಗಳು ಸಾರ್ವಜನಿಕರಿಗೆ ಲಭ್ಯವಿರುವದೇ? – ಇಲ್ಲ.

4(1) ಬಿ (IX): ಅಧಿಕಾರಿಗಳ ಮತ್ತು ನೌಕರರ ನಿರ್ದೇಶಕ – ದಿನಾಂಕ: 31–03–2012 ಕ್ಕೆ ಇದ್ದಂತೆ.

ಕ್ರ.ಸಂ.	ಅಧಿಕಾರಿಗಳ ಹೆಸರು ಮತ್ತು ಹುದ್ದೆ	ದೂರವಾಣಿ ಸಂಖ್ಯೆ
1	ಶ್ರೀ ಜಿ ಮಲ್ಲಪ್ಪ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪ ವಿಭಾಗ	ಕಛೇರಿ– 08398–281250
2	ಶ್ರೀ ಗೋವಿಂದರಾವ ಸಹಕಾರ ಅಭಿವೃದ್ಧಿ ಅಧಿಕಾರಿ	ಸದರ
3	ಶ್ರೀ ಬಿ.ವಿ.ಗಿರಿರಾಜು, ಅಧೀಕ್ಷಕರು	ಸದರ
4	ಶ್ರೀ.ಟಿ.ಚನ್ನಬಸಪ್ಪ, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಸದರ
5	ಶ್ರೀ.ಸೇವ್ಯಾನಾಯ್ಕ, ಸಹಕಾರ ಸಂಘಗಳ ನಿರೀಕ್ಷಕರು	ಸದರ
8	ಶ್ರೀ.ಎನ್ ಜಿ ಪತ್ರೇಗೌಡ, ದ್ವಿತೀಯ ದರ್ಜೆ ಸಹಾಯಕರು	ಸದರ
9	ಶ್ರೀ ಎಂ ಜಿ ಬಸವರಾಜು, ದ್ವಿತೀಯ ದರ್ಜೆ ಸಹಾಯಕರು	ಸದರ

4(1) ಬಿ (X): ಅಧಿಕಾರಿ/ನೌಕರರು, ಹುದ್ದೆ, ಹೆಸರು ಮತ್ತು ವೇತನ ವಿವರ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹರಪನಹಳ್ಳಿ ಉಪ ವಿಭಾಗ ಹರಪನಹಳ್ಳಿ ಇವರ ಕಛೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು ದಿನಾಂಕ : 31–03–2012 ಕ್ಕೆ ಇದ್ದಂತೆ.

ಕ್ರ.ಸಂ.	ಅಧಿಕಾರಿಗಳ ಹೆಸರು ಮತ್ತು ಹುದ್ದೆ	ಗ್ರೇಡ್	ವೇತನ ಶ್ರೇಣಿ		ಮೂಲ ವೇತನ	ಒಟ್ಟು ವೇತನ
			ಕನಿಷ್ಟ	ಗರಿಷ್ಟ		
1	ಶ್ರೀ.ಜಿ ಮಲ್ಲಪ್ಪ, ಸಹಕಾರ ಸಂಘಗಳ ಸಹಾಯಕ ನಿಬಂಧಕರು	ಬಿ	11,400	21600	20550	39454
2	ಶ್ರೀ ಗೋವಿಂದರಾವ ಸಹಕಾರ ಅಭಿವೃದ್ದಿ ಅಧಿಕಾರಿ	ಬಿ	10,800	20025	10500	31406
3	ಶ್ರೀ ಬಿ.ವಿ. ಗಿರಿರಾಜು ಅಧೀಕ್ಷಕರು	ಸಿ	10,000	18150	10500	20158
4	ಶ್ರೀ ಟಿ ಚನ್ನಬಸಪ್ಪ ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಸಿ	8825	16000	10800	20732
4	ಶ್ರೀ.ಸೇವ್ಯಾನಾಯ್ಕ. ನಿರೀಕ್ಷಕರು	ಸಿ	7275	13350	11700	22456
5	ಶ್ರೀ.ಎನ್ ಜಿ ಪತ್ರೇಗೌಡ, ದ್ವಿ.ದ.ಸ	ಸಿ	5800	10500	9275	17811
6	ಶ್ರೀಮತಿ ಎಂ.ಜಿ. ಬಸವರಾಜು ದ್ವಿ.ದ.ಸ	ಸಿ	5800	10500	10000	19200

4(1) ಬಿ (XI): ಯೋಜನೆಯ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮಾಡಲಾದ ಬಟವಾಡೆ ವರದಿಯ ವಿವರ.

ಏಜನ್ಸಿಗಳು ಇರುವುದಿಲ್ಲ.

2011–12ನೇ ಸಾಲಿನ ಬಿಡುಗಡೆಯಾಗಿರುವ ಅನುದಾನದ ವಿವರ.										
ಕ್ರ. ಸಂ	ಪ್ರಯಾಣ ವೆಚ್ಚ 041		ಸಾಮಾನ್ಯ ವೆಚ್ಚ 051		ದೂರವಾಣಿ ವೆಚ್ಚ. 052		ಕಟ್ಟಡ ವೆಚ್ಚ 071		ಸಾರಿಗೆ ವೆಚ್ಚ 195	
1	ಹಂಚಿಕೆ	ವೆಚ್ಚ	ಹಂಚಿಕೆ	ವೆಚ್ಚ	ಹಂಚಿಕೆ	ವೆಚ್ಚ	ಹಂಚಿಕೆ	ವೆಚ್ಚ	ಹಂಚಿಕೆ	ವೆಚ್ಚ
	0.49	**0.49**	**0.08**	**0.08**	**0.10**	**0.10**	**0.34**	**0.32**	**–**	**–**

4. (1) ಬಿ (XII) ಹಣ ಹಂಚಿಕೆ ಮಾಡಿದ ವಿವರಗಳನ್ನೊಳಗೊಂಡಂತೆ ಕಾರ್ಯಕ್ರಮಗಳ ಫಲಾನುಭವಿಗಳ ವಿವರ ಹಾಗೂ ಸಹಾಯಧನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ವಿಧಾನ ದಿನಾಂಕ: 31–03–2012 ಕ್ಕೆ ಇದ್ದಂತೆ 2011–12ನೇ ಸಾಲಿನಲ್ಲಿ ಪಂಚಾಯತ್ ರಾಜ್ಯ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಹಾಗೂ ಸಾಧನೆ (ರೂ. ಲಕ್ಷಗಳಲ್ಲಿ).

ಕ್ರ.ಸಂ	ಯೋಜನೆಗಳು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1.	ರಾಜ್ಯ ಯೋಜನೆ	277	0.87	277	0.83	277	0.83
2.	ಜಿಲ್ಲಾ ಪಂಚಾಯತ್	10	3.20	10	3.20	10	3.20
3.	ತಾಲೂಕ ಪಂಚಾಯತ್	05	0.90	05	0.90	05	0.90

1) ಫಲಾನುಭವಿಗಳ ವಿವರ ಈ ಕೆಳಗಿನಂತೆ ಇರುತ್ತದೆ

2011–12ನೇ ಸಾಲಿನ ಅಂತ್ಯಕ್ಕೆ ಇದ್ದಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಿದ ವಿವರ.

ಎ) ರಾಜ್ಯ ಯೋಜನೆ: ಎ: ಹಿಂದುಳಿದ ವರ್ಗ/ಅಲೆಮಾರಿ ವರ್ಗ/ ಅಲ್ಪಸಂಖ್ಯಾತದ ವರ್ಗದವರನ್ನು ಸದಸ್ಯರನ್ನಾಗಿಸಲು (ರೂ. ಸಾವಿರಗಳಲ್ಲಿ)

ಕ್ರ.ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಹಲವಾಗಲು	277	0.83	277	0.83	277	0.83
	ಒಟ್ಟು	**277**	**0.83**	**277**	**0.83**	**277**	**0.83**

ಎ) ರಾಜ್ಯ ಯೋಜನೆ: ಬಿ: ಪ.ಜಾ/ಪ.ಪಂ./ಹಿಂದುಳಿದ ವರ್ಗ/ ಅಲ್ಪಸಂಖ್ಯಾತದ ವರ್ಗದ ಸಹಕಾರ ಸಂಘಗಳಿಗೆ ಹಣಕಾಸು ಸಹಾಯಧನ (ರೂ. ಸಾವಿರಗಳಲ್ಲಿ)

ಕ್ರ.ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
	ಒಟ್ಟು	**3**	**4.00**	**3**	**3.90**	**3**	**3.90**

2) ಎ) ಜಿಲ್ಲಾ ಪಂಚಾಯತ್ ಯೋಜನೆ: ವಿವಿಧ ವರ್ಗದ ಸಹಕಾರ ಸಂಘಗಳ ಷೇರು ಬಂಡಾವಾಳ.(ಎನ್.ಸಿ.ಡಿ.ಸಿ/ನಬಾರ್ಡ)

(ರೂ. ಲಕ್ಷಗಳಲ್ಲಿ).

ಕ್ರ.ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹಲವಾಗಲು ತಾ: ಹರಪನಹಳ್ಳಿ	1	0.45	1	0.45	1	0.45
2	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಕೆಚ್ಚೆನಹಳ್ಳಿ ತಾ: ಜಗಳೂರು	1	0.45	1	0.45	1	0.45
	ಒಟ್ಟು	**2**	**0.90**	**2**	**0.90**	**2**	**0.90**

2) ಎ) ಜಿಲ್ಲಾ ಪಂಚಾಯತ್ ಯೋಜನೆ: ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯ (ಎನ್.ಸಿ.ಡಿ.ಸಿ)

(ರೂ. ಲಕ್ಷಗಳಲ್ಲಿ).

ಕ್ರ ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಮತ್ತಿಹಳ್ಳಿ ಹರಪನಹಳ್ಳಿ ತಾಲ್ಲೂಕು	1	0.30	1	0.30	1	0.30
2	ಗಂಗಾಂಬೀಕ ಮೀನುಗಾರರ ಉತ್ಪನ್ನ ಮತ್ತು ಮಾರಾಟ ಸ.ಸಂ.ನಿ., ಜಗಳೂರು. ಜಗಳೂರು ತಾಲ್ಲೂಕು	1	0.30	1	0.30	1	0.30
	ಒಟ್ಟು	**2**	**0.60**	**2**	**0.60**	**2**	**0.60**

2) ಎ) ಜಿಲ್ಲಾ ಪಂಚಾಯತ್ ಯೋಜನೆ: ವಿವಿಧ ವರ್ಗದ ಸಹಕಾರ ಸಂಘಗಳಿಗೆ ಬಡ್ಡಿ ರಹಿತ ಸಾಲ

(ರೂ. ಲಕ್ಷಗಳಲ್ಲಿ).

ಕ್ರ ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ., ನಂದಿಬೇವೂರು ತಾ:ಹರಪನಹಳ್ಳಿ	1	0.25	1	0.25	1	0.25
2	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ., ಮೈದೂರು ತಾ: ಹರಪನಹಳ್ಳಿ	1	0.25	1	0.25	1	0.25
3	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ., ಬಸವನಕೋಟೆ ತಾ:ಜಗಳೂರು	1	0.30	1	0.30	1	0.30
4	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ., ಗುತ್ತಿದುರ್ಗಾ	1	0.30	1	0.30	1	0.30
	ಒಟ್ಟು	**4**	**1.10**	**4**	**1.10**	**4**	**1.10**

ಬಿ) ವಿವಿಧ ವರ್ಗಗಳ ಸಹಕಾರ ಸಂಘಗಳಿಗೆ ಸಾಲದ ಸಹಾಯ

(ರೂ. ಲಕ್ಷಗಳಲ್ಲಿ).

ಕ್ರ.ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.ಬಾಗಳಿ ಹರಪನಹಳ್ಳಿ ತಾಲ್ಲೂಕು	1	0.45	1	0.45	1	0.45
2	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,ಬಿಸ್ತುಹಳ್ಳಿ ತಾ:ಜಗಳೂರು	1	0.50	1	0.50	1	0.50
	ಒಟ್ಟು	**2**	**0.95**	**2**	**0.95**	**2.**	**0.95**

II. ತಾಲೂಕ ಪಂಚಾಯತ್ ಯೋಜನೆಯಡಿಯಲ್ಲಿ ಮಹಿಳಾ ಸಹಕಾರ ಸಂಘಗಳಿಗೆ ವ್ಯವಹಾರ ಕಟ್ಟಡಗಳ ನಿರ್ಮಾಣಕ್ಕಾಗಿ ಷೇರು (ಹೂಡಿಕೆಗಳು)

(ರೂ. ಲಕ್ಷಗಳಲ್ಲಿ).

ಕ್ರ. ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತ.,ತೆಲಗಿ ತಾ:ಹರಪನಹಳ್ಳಿ	1	0.20	1	0.20	1	0.20
2	ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘನಿ.,ಚಿಕ್ಕಅರಕೆರೆ ತಾ:ಜಗಳೂರು	1	0.20	1	0.20	1	0.20
	ಒಟ್ಟು	**2**	**0.40**	**2**	**0.40**	**2**	**0.40**

II. ತಾಲೂಕ ಪಂಚಾಯತ್ ಯೋಜನೆಯಡಿಯಲ್ಲಿ ಮಹಿಳಾ ಸಹಕಾರ ಸಂಘಗಳಿಗೆ ವ್ಯವಹಾರ ಕಟ್ಟಡಗಳ ನಿರ್ಮಾಣಕ್ಕಾಗಿ ಸಾಲ (ದುಡಿಮೆ ಬಂಡವಾಳ)

(ರೂ. ಲಕ್ಷಗಳಲ್ಲಿ).

ಕ್ರ. ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತ., ತಾ: ಹರಪನಹಳ್ಳಿ	1	0.10	1	0.10	1	0.10
2	ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತ., ಮೇದಕೆರನಹಳ್ಳಿ ತಾ:ಜಗಳೂರು	1	0.10	1	0.10	1	0.10
	ಒಟ್ಟು	**2**	**0.20**	**2**	**0.20**	**2**	**0.20**

II. ತಾಲೂಕ ಪಂಚಾಯತ್ ಯೋಜನೆಯಡಿಯಲ್ಲಿ ವಿಶೇಷ ಯೋಜನೆಯಡಿಯಲ್ಲಿ ಆಸ್ತಿಗಳ ಸೃಷ್ಟಿಗಾಗಿ ಪಿಕಾರ್ಡ ಬ್ಯಾಂಕ್ ಮಂಜೂರು ಮಾಡಲಾಗಿರುವ ಸಾಲಗಳ ಮೇಲೆ ಸಹಾಯಧನ

(ರೂ. ಲಕ್ಷಗಳಲ್ಲಿ).

ಕ್ರ. ಸಂ	ಸಹಕಾರ ಸಂಘಗಳ ಹೆಸರು	ಗುರಿ		ಮಂಜೂರಾದ ಮೊಬಲಗು		ಬಿಡುಗಡೆಯಾದ ಮೊಬಲಗು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ಹರಪನಹಳ್ಳಿ	1	0.30	1	0.30	1	0.30
	ಒಟ್ಟು	1	0.30	1	0.30	1	0.30

ಸರ್ಕಾರದ ಷೇರು ಹಣದ ಮೇಲೆ ಡಿವಿಡೆಂಡ ಪಾವತಿಸಿದ್ದು ದಿನಾಂಕ 31-03-2012 ಕ್ಕೆ.

ಕ್ರ.ಸಂ	ಸಹಕಾರ ಸಂಘಗಳ ಹೆಸರು	ಡಿವಿಡೆಂಡ ಪಾವತಿಸಿದ ಮೊತ್ತ	ಚಲನ್ ಸಂ. & ದಿನಾಂಕ
1	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಉಚ್ಚಂಗಿದುರ್ಗ ತಾ: ಹರಪನಹಳ್ಳಿ	17500	11/04-10-2011
	ಒಟ್ಟು		

ಒಂದು ಗೋದಾಮ (ಉಗ್ರಾಣ) ಇಲ್ಲದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವಿವರಗಳು.

ಕ್ರ.ಸಂ	ಗೋದಾಮು ಇಲ್ಲದ ಸಹಕಾರ ಸಂಘಗಳ ಹೆಸರು	ತಾಲೂಕು
1.	ಪ್ರಾ.ಕೃ.ಪ.ಸ.ಸಂ.ನಿ., ಮೈದೂರು	ಹರಪನಹಳ್ಳಿ
2	ಪ್ರಾ.ಕೃ.ಪ.ಸ.ಸಂ.ನಿ., ಹಿರೇಮ್ಯಾಗೇಳಗೆರೆ	ಹರಪನಹಳ್ಳಿ
3	ಪ್ರಾ.ಕೃ.ಪ.ಸ.ಸಂ.ನಿ., ಅಸಗೋಡ	ಜಗಳೂರು
4	ಪ್ರಾ.ಕೃ.ಪ.ಸ.ಸಂ.ನಿ., ಪಲ್ಲಾಗಟ್ಟೆ	ಜಗಳೂರು
5	ಪ್ರಾ.ಕೃ.ಪ.ಸ.ಸಂ.ನಿ., ಚಿಕ್ಕಅರಿಕೆರೆ	ಜಗಳೂರು
6	ಪ್ರಾ.ಕೃ.ಪ.ಸ.ಸಂ.ನಿ., ಜಗಳೂರು	ಜಗಳೂರು
7	ಪ್ರಾ.ಕೃ.ಪ.ಸ.ಸಂ.ನಿ., ಗುತ್ತಿದುರ್ಗಾ	ಜಗಳೂರು
8	ಪ್ರಾ.ಕೃ.ಪ.ಸ.ಸಂ.ನಿ., ಕೆಚ್ಚನಹಳ್ಳಿ	ಜಗಳೂರು

4(1) ಬಿ (XIII) : ರಿಯಾಯತಿಗಳು,ಅಪ್ಪಣೆ ಪತ್ರಗಳು, ಅಥವಾ ಅಧಿಕಾರ ಪತ್ರಗಳನ್ನು ಪಡೆದವರ ವಿವರಗಳು: –

ಯಾವುದೇ ರಿಯಾಯಿತಿ, ಅಪ್ಪಣೆ ಪತ್ರ ಮಂಜೂರು ಇರುವುದಿಲ್ಲ.

4(1) ಬಿ (XIV) : ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸುವ ಮಾಹಿತಿಗೆ ಸಂಬಂಧಿಸಿದ ವಿವರಗಳು –

1. ಹರಪನಹಳ್ಳಿ ಉಪ ವಿಭಾಗದಲ್ಲಿ ದೊರೆಯುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಇಳಿಸಿರುವ ಮಾಹಿತಿಗಳು ಇರುವುದಿಲ್ಲ.

4(1) ಬಿ (XV) : ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು – ಇರುವುದಿಲ್ಲ.

4(1) ಬಿ (XV) : ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು – ಇರುವುದಿಲ್ಲ.

4(1) ಬಿ (XVI) : ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ ಮತ್ತು ಇತರ ವಿವರಗಳು:

ಕ್ರ.ಸಂ.	ಅಧಿಕಾರಿಗಳ ಹೆಸರು ಮತ್ತು ಹುದ್ದೆ	ವಿವರ
1	ಶ್ರೀ.ಜಿ ಮಲ್ಲಪ್ಪ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ	ಸಾರ್ವಜನಿಕ ಮಾಹಿತಿ ಪ್ರಾಧಿಕಾರ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು. ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ
2	ಶ್ರೀ ಟಿ ಚನ್ನಬಸಪ್ಪ, ಸ.ಸಂ. ಹಿರಿಯ ನಿರೀಕ್ಷಕರು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ	ಸಹಾಯಕ ಸಾರ್ವಜನಿಕ ಮಾಹಿತಿ ಪ್ರಾಧಿಕಾರ ಹಾಗೂ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ
3	ಶ್ರೀ.ಬಿ.ಕುಬೇರಪ್ಪ ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ ದಾವಣಗೆರೆ	ಮೇಲ್ಮನವಿ ಪ್ರಾಧಿಕಾರ (ಅಪೀಲ್) ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ ದಾವಣಗೆರೆ

4(1) ಬಿ (XVII) : ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸುವುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ ಕಾರ್ಯಲಯಕ್ಕೆ ಮಾಹಿತಿ ಹಕ್ಕು ಪ್ರಾಧಿಕಾರ ಸಾರ್ವಜನಿಕ/ಸಹಾಯಕ ಸಾರ್ವಜನಿಕ ಮತ್ತು ಮೇಲ್ಮನವಿ ಪ್ರಾಧಿಕಾರ ಮಾಹಿತಿ ಅಧಿಕಾರಿಗಳ ಪಟ್ಟಿ.

ಕ್ರ. ಸಂ	ಇಲಾಖೆ	ಕಚೇರಿಯ ಹೆಸರು ಮತ್ತು ವಿಳಾಸ	ಪದನಾಮ	ದೂರವಾಣಿ ಸಂಖ್ಯೆ	ಅಧಿಕಾರಿಗಳ ನೇಮಕಾತಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
1	ಸಹಕಾರ ಇಲಾಖೆ	ಶ್ರೀ.ಜಿ ಮಲ್ಲಪ್ಪ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪ ವಿಭಾಗ,ಹರಪನಹಳ್ಳಿ	ಸಾರ್ವಜನಿಕ ಮಾಹಿತಿ ಪ್ರಾಧಿಕಾರಿ	08398–281250	ಮಾನ್ಯ ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ: ಎಡಿಎಂ/ ಆರ್.ಐ.ಎ.ಸಿ/ 17/05–06. ದಿನಾಂಕ: 22–09–2005.
2	ಸಹಕಾರ ಇಲಾಖೆ	ಶ್ರೀ ಟಿ ಚನ್ನಬಸಪ್ಪ, ಸ.ಸಂ. ಹಿರಿಯ ನಿರೀಕ್ಷಕರು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ	ಸಹಾಯಕ ಸಾರ್ವಜನಿಕ ಮಾಹಿತಿ ಪ್ರಾಧಿಕಾರಿ	08398–281250	ಮಾನ್ಯ ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಅಧಿಸೂಚನೆಸಂಖ್ಯೆ:ಎಡಿಎಂ/ಆರ್. ಐ.ಎ.ಸಿ/17/05–06. ದಿನಾಂಕ:22–09–2005.
3	ಸಹಕಾರ ಇಲಾಖೆ	ಶ್ರೀ.ಬಿ.ಕುಬೇರಪ್ಪ ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ ದಾವಣಗೆರೆ	ಮೇಲ್ಮನವಿ ಪ್ರಾಧಿಕಾರಿ	08192–251632	ಮಾನ್ಯ ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಎಡಿಎಂ/ಆರ್.ಐ.ಎ.ಸಿ/ 17/05–06. ದಿನಾಂಕ 22–09–2005.

ಪಿ.ಆರ್.1406

ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಸಂಖ್ಯೆ: ಎಲ್‌ಎನ್‌ಡಿ.ಸಿಆರ್.231/2011–12 ದಿನಾಂಕ: 13/08/2012

ನಮೂನೆ–27

ಅಧಿಸೂಚನೆ

ವಿಷಯ : ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಅಣಕನೂರು ಗ್ರಾಮದ ಸ.ನಂ.19 ರಲ್ಲಿ 3–35 ಎಕರೆ ಜಮೀನನ್ನು ಜಿಲ್ಲಾ ಗೃಹ ರಕ್ಷಕ ಇಲಾಖೆಯ ಕಛೇರಿ ಕಟ್ಟಡ, ಕವಾಯತು, ತರಬೇತಿ ಮೈದಾನಕ್ಕಾಗಿ ಮಂಜೂರು ಮಾಡುವ ವಿಚಾರದಲ್ಲಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ :

1. ಸರ್ಕಾರದ ಪತ್ರ ಸಂಖ್ಯೆ: ಆರ್.ಡಿ.33.ಎಲ್‌ಜಿಕೆ.2012, ದಿನಾಂಕ: 02/05/2012.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.166/2011–12, ದಿನಾಂಕ: 02/07/2012.
3. ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್‌ಎನ್‌ಡಿ..ಸಿಆರ್.76/2011–12, ದಿನಾಂಕ: 26/10/2011.
4. ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ ಸಿಆರ್.118/2009–10, ದಿನಾಂಕ: 18/10/2011.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ **"ಸರ್ಕಾರಿ"** ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ **"ಸರ್ಕಾರಿ"** ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಸದರಿ **"ಸರ್ಕಾರಿ"** ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ **"ಸರ್ಕಾರಿ"** ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದು ಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ	:	ಚಿಕ್ಕಬಳ್ಳಾಪುರ
ತಾಲ್ಲೂಕು	:	ಚಿಕ್ಕಬಳ್ಳಾಪುರ
ಹೋಬಳಿ	:	ಕಸಬಾ
ಗ್ರಾಮ	:	ಅಣಕನೂರು

ಸರ್ವೆ ನಂಬರು 19 ರಲ್ಲಿ 3–35 ಎಕರೆ ಪ್ರದೇಶವನ್ನು ಜಿಲ್ಲಾ ಗೃಹ ರಕ್ಷಕ ಇಲಾಖೆಯ ಕಛೇರಿ ಕಟ್ಟಡ, ಕವಾಯುತು, ತರಬೇತಿ ಮೈದಾನಕ್ಕಾಗಿ ಜಿಲ್ಲಾ ಗೃಹ ರಕ್ಷಕ ಇಲಾಖೆಗೆ ವರ್ಗಾವಣೆ ಮಾಡುವ ಸಲುವಾಗಿ ಸಾರ್ವಜನಿಕರ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ :

ಸ.ನಂ.19 ರಲ್ಲಿ 3–35 ಎಕರೆ ಜಮೀನಿಗೆ :

ಪೂರ್ವಕ್ಕೆ	:	ತಾಂಡ್ರಮಾಕಲಹಳ್ಳಿ ಗ್ರಾಮದ ಗಡಿ
ಪಶ್ಚಿಮಕ್ಕೆ	:	ಸ.ನಂ.18 ಮತ್ತು 216 ರ ಜಮೀನು
ಉತ್ತರಕ್ಕೆ	:	ತಾಂಡ್ರಮಾಕಲಹಳ್ಳಿ ಗ್ರಾಮದ ಗಡಿ
ದಕ್ಷಿಣಕ್ಕೆ	:	ರಸ್ತೆ

ಜಿಲ್ಲಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ.

PR. 1480

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಆಯುಕ್ತರು (ಭೂಸ್ವಾಧೀನ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ಮೊದಲನೇ ಮಹಡಿ, ಹೊಸ ಕಟ್ಟಡ (ಮೇಜರ್ ರೋಡ್ಸ್), ಅನೆಕ್ಸ್ ಬಿಲ್ಡಿಂಗ್ ಹಿಂಭಾಗ, ಎನ್.ಆರ್.ವೃತ್ತ, ಬೆಂಗಳೂರು–02.

ಸಂಖ್ಯೆ: ಎಲ್ಎಕ್ಯೂ/ಸಿಆರ್/15/2009–10 ದಿನಾಂಕ: 08–10–2012

ತಿದ್ದುಪಡಿ ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:151, ಕೋರಮಂಗಲ ಮತ್ತು ವಾರ್ಡ್ ಸಂಖ್ಯೆ:172 ಮಡಿವಾಳ ವ್ಯಾಪ್ತಿಯಲ್ಲಿ ಬರುವ ಹೊಸೂರು ರಸ್ತೆಯನ್ನು (ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಯಾಂಕೆ ಫ್ಯಾಕ್ಟರಿ ಜಂಕ್ಷನ್‌ವರೆಗೆ) 30.00 ಮೀಗಳಿಗೆ ರಸ್ತೆ ಅಗಲೀಕರಣಗೊಳಿಸುವ ಸಾರ್ವಜನಿಕ ಉದ್ದೇಶಕ್ಕಾಗಿ 47 ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿದ್ದು, ಸದರಿ ಸ್ವತ್ತನ್ನು 1894ರ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ:16–07–2011 ರಂದು ಹೊರಡಿಸಲಾದ ಪ್ರಾಥಮಿಕ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ:18–08–2011 ರಂದು ಭಾಗ–3 ಪುಟಸಂಖ್ಯೆ:2614 ರಿಂದ 2623 ರ ವರೆಗೆ ಪ್ರಕಟವಾಗಿರುತ್ತದೆ. ಈ ಪ್ರಕಟಣೆಯಲ್ಲಿ ಪ್ರಕಟಿಸಿರುವ ಆಸ್ತಿಗಳ ಅಳತೆಯಲ್ಲಿ ವ್ಯತ್ಯಾಸವಿರುವುದರಿಂದ ಇದನ್ನು ತಿದ್ದುಪಡಿ ಮಾಡುವುದು ಅವಶ್ಯಕವಿರುವುದರಿಂದ ಅಂಕಣ–2 ರಲ್ಲಿ ಕಾಣಿಸಿರುವ ವಿಸ್ತೀರ್ಣಕ್ಕೆ ಬದಲಾಗಿ ಅಂಕಣ–3 ರಲ್ಲಿ ಕಾಣಿಸಿರುವ ವಿಸ್ತೀರ್ಣವನ್ನ ಓದಿಕೊಳ್ಳಬೇಕೆಂದು ಮಾಡಿರುವ ತಿದ್ದುಪಡಿ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕ್ರ.ಸಂ.	4(1) ರಲ್ಲಿ ಪ್ರಕಟವಾಗಿರುವ ವಿಸ್ತೀರ್ಣ (ಚ.ಮೀ.ಗಳಲ್ಲಿ)	ತಿದ್ದುಪಡಿಯಂತೆ ಓದಿಕೊಳ್ಳಬೇಕಾದ ವಿಸ್ತೀರ್ಣ (ಚ.ಮೀ.ಗಳಲ್ಲಿ)
1	**2**	**3**
25	37.00	45.10
26	13.55	13.50
27	20.07	23.70
33	12.80	13.20
34	10.00	9.60
35	10.00	9.00
36	11.05	9.50
38	26.17	33.91
41	16.80	13.58

ದಿನಾಂಕ: 08–10–2012		**ಉಪ ಆಯುಕ್ತರು (ಭೂಸ್ವಾಧೀನ)**
ಸ್ಥಳ: ಬೆಂಗಳೂರು		**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

PD. 109

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಆಯುಕ್ತರು (ಭೂಸ್ವಾಧೀನ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ಮೊದಲನೇ ಮಹಡಿ, ಹೊಸ ಕಟ್ಟಡ (ಮೇಜರ್ ರೋಡ್ಸ್), ಅನೆಕ್ಸ್ ಬಿಲ್ಡಿಂಗ್ ಹಿಂಭಾಗ, ಎನ್.ಆರ್.ವೃತ್ತ, ಬೆಂಗಳೂರು–02.

ಸಂಖ್ಯೆ: ಎಲ್ಎಕ್ಯೂ/ಸಿಆರ್/58/2010–11. ದಿನಾಂಕ:03–11–2012

ತಿದ್ದುಪಡಿ ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಚಿಕ್ಕಲಸಂದ್ರ ವಾರ್ಡ್ ಸಂಖ್ಯೆ:183, (ಹಳೇವಾರ್ಡ್ ಸಂಖ್ಯೆ:55) ರ ಇಟ್ಟಮಡು ಗ್ರಾಮದ ಸ್ವತ್ತಿನ ಸಂಖ್ಯೆ:2, 2ಎ (ಹಳೆ ಸರ್ವೆನಂ.6/1, 6/2), 2ನೇ ಮುಖ್ಯರಸ್ತೆ, ಬನಶಂಕರಿ 3ನೇಹಂತದ ಸ್ವತ್ತುಗಳಲ್ಲಿನ ಭಾಗಶ:ವಿಸ್ತೀರ್ಣವಾದ 620.60 ಚ.ಅಡಿ ಜಾಗವು ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು 1894 ರ ಭೂಸ್ವಾಧೀನ ಕಾಯ್ದೆಯ ಕಲಂ 4(1) ರ ಅಧಿಸೂಚನೆಯನ್ನು ದಿನಾಂಕ:–27–08–2011 ರಂದು ಹೊರಡಿಸಿದ್ದು, ಅದು ದಿನಾಂಕ:–20–10–2011 ರ ಕರ್ನಾಟಕ ರಾಜ್ಯ ಪತ್ರದ ಭಾಗ–3, ಪುಟ ಸಂಖ್ಯೆ:3557 ರಲ್ಲಿ ಪ್ರಕಟವಾಗಿರುತ್ತದೆ. ಈ ಪ್ರಕಟಣೆಯಲ್ಲಿ ಪ್ರಕಟಿಸಿರುವ 620.60 ಚ.ಅಡಿಗೆ ಬದಲಾಗಿ 625 ಚ.ಅಡಿ ಎಂದು, ಓದಿಕೊಳ್ಳಬೇಕೆಂದೂ ಮಾಡಿದ ತಿದ್ದುಪಡಿಯಾಗಿರುತ್ತದೆ. ಇನ್ನುಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ದಿನಾಂಕ: 03–11–2012		**ಉಪ ಆಯುಕ್ತರು (ಭೂಸ್ವಾಧೀನ)**
ಸ್ಥಳ: ಬೆಂಗಳೂರು		**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

PD.105

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಆಯುಕ್ತರು (ಭೂಸ್ವಾಧೀನ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ಮೊದಲನೇ ಮಹಡಿ, ಹೊಸ ಕಟ್ಟಡ (ಮೇಜರ್ ರೋಡ್ಸ್), ಅನೆಕ್ಸ್ ಬಿಲ್ಡಿಂಗ್ ಹಿಂಭಾಗ, ಎನ್.ಆರ್.ವೃತ್ತ, ಬೆಂಗಳೂರು-02.

ಸಂಖ್ಯೆ: ಎಲ್‌ಎಕ್ಯೂ/ಸಿಆರ್/18/2011-12. ದಿನಾಂಕ:06-11-2012

ತಿದ್ದುಪಡಿ ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:45 ರ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಯಶವಂತಪುರ ಗ್ರಾಮದ ಸರ್ವೆನಂ.38 ರ ಪೈಕಿ ಎಲ್.ಎ.ನಂ.3, ಸಿಟಿಎಸ್. ನಂ.18 ರಲ್ಲಿನ ಸ್ವತ್ತಿನ ಪಿ.ಐ.ಡಿ.ಸಂಖ್ಯೆ:7-91-18 ರ ಪೈಕಿ 4361.03 ಚ.ಅಡಿ ಜಾಗವನ್ನು ಯಶವಂತಪುರದಲ್ಲಿ ಬಿ.ಎಂ.ಟಿ.ಸಿ.ಗೆ ಸೇರಿದ ಟಿ.ಟಿ.ಎಂ.ಸಿ. ಕೇಂದ್ರಕ್ಕೆ ಹೊಂದಿಕೊಂಡಂತೆ ಇರುವ ಜಾಗದಲ್ಲಿ ಮೇಲು ಸೇತುವೆ ಕೆಳಗೆ ಅಂಡರ್‌ಪಾಸ್ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು 1894ರ ಭೂಸ್ವಾಧೀನ ಕಾಯ್ದೆಯ ಕಲಂ 4(1) ರನ್ವಯ ಅಧಿಸೂಚನೆ ದಿನಾಂಕ:-09-03-2012 ರಂದು ಹೊರಡಿಸಿದ್ದು, ಅದು ದಿನಾಂಕ:-05-04-2012 ರ ಕರ್ನಾಟಕ ರಾಜ್ಯ ಪತ್ರದ ಭಾಗ-3, ಪುಟ ಸಂಖ್ಯೆ:1875 ಮತ್ತು 1876 ರಲ್ಲಿ ಪ್ರಕಟವಾಗಿರುತ್ತದೆ. ಈ ಪ್ರಕಟಣೆಯಲ್ಲಿ ಪ್ರಕಟಿಸಿರುವ 4361.03 ಚ.ಅಡಿಗೆ ಬದಲಾಗಿ 2664.71 ಚ.ಅಡಿ ಎಂದು, ಓದಿಕೊಳ್ಳಬೇಕೆಂದು ಮಾಡಿದ ತಿದ್ದುಪಡಿಯಾಗಿರುತ್ತದೆ. ಇನ್ನುಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ದಿನಾಂಕ: 06-11-2012 **ಉಪ ಆಯುಕ್ತರು (ಭೂಸ್ವಾಧೀನ)**
ಸ್ಥಳ: ಬೆಂಗಳೂರು **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

PD . 106

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಆಯುಕ್ತರು (ಭೂಸ್ವಾಧೀನ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ಮೊದಲನೇ ಮಹಡಿ, ಹೊಸ ಕಟ್ಟಡ (ಮೇಜರ್ ರೋಡ್ಸ್), ಅನೆಕ್ಸ್ ಬಿಲ್ಡಿಂಗ್ ಹಿಂಭಾಗ, ಎನ್.ಆರ್.ವೃತ್ತ, ಬೆಂಗಳೂರು-02.

ಸಂಖ್ಯೆ: ಎಲ್‌ಎಕ್ಯೂ/ಪಿಆರ್/14/2011-12. ದಿನಾಂಕ:22-09-2012

ತಿದ್ದುಪಡಿ ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:156,(ಹಳೆ ವಾರ್ಡ್ ನಂ.140) ಶ್ರೀನಗರ ವಾರ್ಡ್‌ನಲ್ಲಿ ಬರುವ ಬೆಂಗಳೂರು ದಾಸರಹಳ್ಳಿ ಮುಖ್ಯರಸ್ತೆ, (ಹಾಲಿ ಶ್ರೀನಗರ ಮುಖ್ಯರಸ್ತೆ) 10ನೇ ಮುಖ್ಯರಸ್ತೆಯ ತಿರುವಿನಲ್ಲಿರುವ ಖಾಸಗಿ ಸ್ವತ್ತಿನ ಸಿ.ಟಿ.ಎಸ್.ನಂ.810, ಸ್ವತ್ತಿನ ನಂ.140/26, ಪಿ.ಐ.ಡಿ.ನಂ.53-29-26(ಮೂಲೆ ನಿವೇಶನ)ರಲ್ಲಿನ ಭಾಗಶಃ ವಿಸ್ತೀರ್ಣದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ವಿಚಾರದಲ್ಲಿ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆಯನ್ನು ದಿನಾಂಕ:31-10-2011 ರಂದು ಹೊರಡಿಸಿದ್ದು, ಅದು ದಿನಾಂಕ: 24-11-2011 ರ ಕರ್ನಾಟಕ ರಾಜ್ಯ ಪತ್ರದ ಭಾಗ-3 ಪುಟ ಸಂಖ್ಯೆ:3976 ರಿಂದ 3977ರವರೆಗೆ ಪ್ರಕಟವಾಗಿರುತ್ತದೆ. ಈ ಪ್ರಕಟಣೆಯಲ್ಲಿ ಪ್ರಕಟಿಸಿರುವ 59 ಚ.ಅಡಿ ವಿಸ್ತೀರ್ಣಕ್ಕೆ ಬದಲಾಗಿ ವಿಸ್ತೀರ್ಣ 80.7 ಚ.ಅಡಿ ವಿಸ್ತೀರ್ಣವೆಂದೂ ಓದಿಕೊಳ್ಳಬೇಕೆಂದು ಮಾಡಿದ ತಿದ್ದುಪಡಿ ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ದಿನಾಂಕ: 22-09-2012 **ಉಪ ಆಯುಕ್ತರು (ಭೂಸ್ವಾಧೀನ)**
ಸ್ಥಳ: ಬೆಂಗಳೂರು **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

PD. 104

ಕಂದಾಯ ಸಚಿವಾಲಯ

ನಮೂನೆ 29

ಅಧಿಸೂಚನೆ ಸಂಖ್ಯೆ: ಕಂಇ.507.ಎಲ್‌ಜಿಬಿ. 2012 ಬೆಂಗಳೂರು, ದಿನಾಂಕ: 30/08/2012

68ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗಿನ ಘೋಷಣೆ-ನಿಯಮ 96

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (5)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ದಿ:15/03/2012ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ಎಲ್‌ಎನ್‌ಡಿ.ಸಿಆರ್.642/10-11 ದಿನಾಂಕ 02/03/12ರ ಕ್ರಮಸಂಖ್ಯೆಯ ಅಧಿಸೂಚನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಬಿ-ಖರಾಬು ಜಮೀನು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ವ್ಯವಹರಣೆಗಳ ದಾಖಲೆಗಳನ್ನು ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ವರದಿಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿದ ತರುವಾಯ, ಸರ್ಕಾರಿ ಬಿ-ಖರಾಬು ಜಮೀನಿನ ಮೇಲಣ ಸಾರ್ವಜನಿಕರ ಹಾಗೂ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಕೊನೆಗೊಳ್ಳತಕ್ಕದೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ಜಮೀನು ಇರುವ ಗ್ರಾಮ	ಯಮಲೂರು ಗ್ರಾಮದ ಸ.ನಂ.49/1ರಲ್ಲಿ 0–04 ಗುಂಟೆ ಮತ್ತು ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಸ.ನಂ.99/1ರಲ್ಲಿ 0–02 ಗುಂಟೆ, ಸ.ನಂ.96ರಲ್ಲಿ 0–01 ಗುಂಟೆ, ಸ.ನಂ. 97ರಲ್ಲಿ 0–01 ಗುಂಟೆ, 98/1ರಲ್ಲಿ 0–01 ಗುಂಟೆ, ಸ.ನಂ.92/2ರಲ್ಲಿ 0–01 ಗುಂಟೆ ಸ.ನಂ.99/1ರಲ್ಲಿ 0–01 ಗುಂಟೆ, ಸ.ನಂ.104ರಲ್ಲಿ 0–01 ಗುಂಟೆ, ಸ.ನಂ.120/1ಎ ರಲ್ಲಿ 0–03 ಗುಂಟೆ ಮತ್ತು ಸ.ನಂ. 120/2ಎ ರಲ್ಲಿ 0–02 ಗುಂಟೆ ಮತ್ತು ಸ.ನಂ.120/2ಬಿರಲ್ಲಿ 0–01 ಗುಂಟೆ–ಒಟ್ಟು 0–18 ಗುಂಟೆ
ತಾಲ್ಲೂಕು	ಬೆಂಗಳೂರು ಪೂರ್ವ ತಾಲ್ಲೂಕು
ಜಿಲ್ಲೆ	ಬೆಂಗಳೂರು ಜಿಲ್ಲೆ
ಸದರಿ ಭಾಗದ ವರ್ಣನೆ	ಬಿ–ಖರಾಬು
ಸರಿಸುಮಾರು ವಿಸ್ತೀರ್ಣ	ಒಟ್ಟು 0–18 ಗುಂಟೆ
ಸಾರ್ವಜನಿಕರಸ್ತೆ/ಬೀದಿ/ಗಲ್ಲಿ/ದಾರಿ ಅಥವಾ ಅದರ ಭಾಗ	ಯಮಲೂರು ಮತ್ತು ಅಮಾನಿಬೆಳ್ಳಂದೂರುಖಾನೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಕೆ. ರಾಮಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಮಂಜೂರಾತಿ–1)

PR. 1341

ಕಂದಾಯ ಸಚಿವಾಲಯ

ಅಧಿಸೂಚನೆ

ನಮೂನೆ 29

ಸಂಖ್ಯೆ: ಆರ್‌ಡಿ 17 ಎಲ್‌ಜಿಕೆ 2012 ಬೆಂಗಳೂರು, ದಿನಾಂಕ: 27/09/2012

68ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗಿನ ಘೋಷಣೆ–ನಿಯಮ 96,

ಕರ್ನಾಟಕ ಭೂ ಕಂದಾಯ ಅಧಿನಿಯಮ (1964)ರ 68ನೇ ಪ್ರಕರಣದ (5)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕ: 20–10–2011ರ ಸಂ.ಎಲ್‌ಎನ್‌ಡಿ.ಸಿಆರ್/96/10–11, ದಿನಾಂಕ:21–07–2011 ಕ್ರಮ ಸಂಖ್ಯೆಯ ಅಧಿಸೂಚನೆಯ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿದ ಮತ್ತು ಕೆಳಗಿನ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿದ ಸರ್ಕಾರಿ 'ಬಿ' ಖರಾಬು ಜಮೀನು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ವ್ಯವಹರಣೆಗಳ ದಾಖಲಾತಿ ಹಾಗೂ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ಇವರ ವರದಿ ಮೇರೆಗೆ ಪರಿಶೀಲಿಸಿದ ನಂತರ ಸರ್ಕಾರಿ 'ಬಿ' ಖರಾಬು ಜಮೀನಿನ ಮೇಲಣ ಸಾರ್ವಜನಿಕರ ಹಾಗೂ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಕೊನೆಗೊಳ್ಳತಕ್ಕದೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ಜಮೀನು ಇರುವ ಗ್ರಾಮ	ತಂಬಿಹಳ್ಳಿ ಗ್ರಾಮ, ಹುತ್ತೂರು ಹೋಬಳಿ
ತಾಲ್ಲೂಕು	ಕೋಲಾರ ತಾಲ್ಲೂಕು
ಜಿಲ್ಲೆ	ಕೋಲಾರ
ಸದರಿ ಭಾಗದ ವರ್ಣನೆ	ಸರ್ಕಾರಿ ಖರಾಬು ಜಮೀನು
ಸರಿ ಸುಮಾರು ವಿಸ್ತೀರ್ಣ	ಸ.ನಂ.179 ರಲ್ಲಿ 0–36 ಗುಂಟೆ
ಸಾರ್ವಜನಿಕ ರಸ್ತೆ/ಬೀದಿ/ಗಲ್ಲಿ/ದಾರಿ ಅಥವಾ ಅದರ ಭಾಗ	ತಂಬಿಹಳ್ಳಿ ಗ್ರಾಮ
ಮೇರೆಗಳು	ಪೂರ್ವಕ್ಕೆ: ಸ.ನಂ.179ರ ಉಳಿಕೆ ಜಮೀನು ಪಶ್ಚಿಮಕ್ಕೆ: ಸ.ನಂ.179ರ ಉಳಿಕೆ ಜಮೀನು ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಸ.ನಂ179ರ ಉಳಿಕೆ ಜಮೀನು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–1)

P.R. 1358

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಅಧಿಸೂಚನೆ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.391/2011–12 ದಿನಾಂಕ: 22 /10/2012

ನಮೂನೆ–27

ವಿಷಯ : 1. ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವಾಪಸಂದ್ರ ಗ್ರಾಮದ ಸ.ನಂ.185 ರಲ್ಲಿ 0–05 ಗುಂಟೆ ಜಮೀನನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತಪತ್ರಕರ್ತರ ಭವನ ನಿರ್ಮಾಣಕ್ಕಾಗಿ ಮಂಜೂರು ಮಾಡುವ ವಿಚಾರದಲ್ಲಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ : 2. ಸರ್ಕಾರದ ಪತ್ರ ಸಂಖ್ಯೆ: ಆರ್.ಡಿ.158.ಎಲ್‌ಜಿಹೆಚ್.2012, ದಿನಾಂಕ: 26/09/2012.

3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ.ಸಿಆರ್.278/2011–12, ದಿನಾಂಕ: 09/10/2012.

4. ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ:ಎಲ್‌ಎನ್‌ಡಿ.ಸಿಆರ್.110/2011–12, ದಿನಾಂಕ: 25/01/2012.

5. ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ ಸಿಆರ್.278/2011–12, ದಿನಾಂಕ: 20/12/2011.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ **"ಮುನ್ಸಿಪಲ್ ಬಸ್ ನಿಲ್ದಾಣ, ತಾಲ್ಲೂಕು ಕಛೇರಿ ಹಾಗೂ ಇತರೆ"** ಪ್ರದೇಶದ ಪೈಕಿ 0–05 ಗುಂಟೆ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ **"ಮುನ್ಸಿಪಲ್ ಬಸ್ ನಿಲ್ದಾಣ, ತಾಲ್ಲೂಕು ಕಛೇರಿ ಹಾಗೂ ಇತರೆ"** ಪ್ರದೇಶದ ಜಮೀನಿನಲ್ಲಿ 0–05 ಗುಂಟೆ ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಸದರಿ **"ಮುನ್ಸಿಪಲ್ ಬಸ್ ನಿಲ್ದಾಣ, ತಾಲ್ಲೂಕು ಕಛೇರಿ ಹಾಗೂ ಇತರೆ"** ಪ್ರದೇಶದ 0–05 ಗುಂಟೆ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ **"ಮುನ್ಸಿಪಲ್ ಬಸ್ ನಿಲ್ದಾಣ, ತಾಲ್ಲೂಕು ಕಛೇರಿ ಹಾಗೂ ಇತರೆ"** ಪ್ರದೇಶದಲ್ಲಿ 0–05 ಗುಂಟೆ ಜಮೀನಿನ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದು ಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ	:	ಚಿಕ್ಕಬಳ್ಳಾಪುರ
ತಾಲ್ಲೂಕು	:	ಚಿಕ್ಕಬಳ್ಳಾಪುರ
ಹೋಬಳಿ	:	ಕಸಬಾ
ಗ್ರಾಮ	:	ವಾಪಸಂದ್ರ

ಸರ್ವೆ ನಂಬರು 185 ರಲ್ಲಿ 0–05 ಗುಂಟೆ ಪ್ರದೇಶವನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ ನಿರ್ಮಾಣಕ್ಕಾಗಿ ಮಂಜೂರು ಮಾಡುವ ಸಲುವಾಗಿ ಸಾರ್ವಜನಿಕರ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ :

ಸ.ನಂ.185 ರಲ್ಲಿ 0–05 ಗುಂಟೆ ಜಮೀನಿಗೆ ಃ

ಪೂರ್ವಕ್ಕೆ	:	ತೋಟಗಾರಿಕೆ ಇಲಾಖೆ ಕಾಂಪೌಂಡ್
ಪಶ್ಚಿಮಕ್ಕೆ	:	ರಸ್ತೆ
ಉತ್ತರಕ್ಕೆ	:	ಉಪವಿಭಾಗಾಧಿಕಾರಿಗಳ ಕಛೇರಿ,
ದಕ್ಷಿಣಕ್ಕೆ	:	ರಸ್ತೆ

ಜಿಲ್ಲಾಧಿಕಾರಿಗಳು
ಚಿಕ್ಕಬಳ್ಳಾಪುರ ಜಿಲ್ಲೆ

P.R. 1515